ರುಚಿಕರವಾದ ಉಪಹಾರ
ಸಿಹಿ – ಖಾರ ತಿಂಡಿಗಳು
ನ್ಯೂ ಕೋರ್ಟ್
ರೆಸ್ಟೋರೆಂಟ್
ಹೊಸ ಬಸ್‌ಸ್ಟ್ಯಾಂಡ್ ಬಳಿ
ಕುಂದಾಪುರ
ಫೋ : 232878

www.kundaprabha.com e-mail : kundaprabha@gmail.com

# ಕುಂದಪ್ರಭ

ವಾರಪತ್ರಿಕೆ

ಸ್ಥಾಪನೆ : 1948
6 ದಶಕಗಳ
ವಿಶ್ವಾಸನೀಯ ಸೇವೆಯಲ್ಲಿ
ಶೇಟ್
ಜ್ಯುವೆಲ್ಲರ್ಸ್
ಶಂಕರ್ ಶೇಟ್ ಬಿಲ್ಡಿಂಗ್
ಮುಖ್ಯರಸ್ತೆ, ಕುಂದಾಪುರ
ಫೋನ್ : 230242

॥ ಸಂಪುಟ : 28 ॥ ಸಂಚಿಕೆ : 41॥ UDP/1263/2018-20 || R.NO.50495/91 ॥ ತಾರೀಕು : 20–11–2018 ॥ ರೂ 5/– ॥ ವಾರ್ಷಿಕ ಚಂದಾ : 300/– ಅಂಚೆಯಲ್ಲಿ : 400/

## ಗಜ ಚಂಡಮಾರುತ ಗುಡುಗು, ಸಿಡಿಲು, ಮಳೆ

### ಇನ್ನೆರಡು ದಿನ ಕಟ್ಟೆಚ್ಚರ

ಗಜ ಚಂಡಮಾರುತದ ಪರಿಣಾಮವಾಗಿ ಕರಾವಳಿಯಲ್ಲಿ ಆಕಸ್ಮಿಕವಾಗಿ ಎಂಬಂತೆ ಆದಿತ್ಯವಾರ ಸಂಜೆ ನಂತರ ಗುಡುಗು ಸಿಡಿಲು ಸಹಿತ ಮಳೆ ಬಂದುದರಿಂದ ಜನಜೀವನದ ಮೇಲೆ ಪರಿಣಾಮ ಉಂಟಾಯಿತು. ಸಂಜೆಯಿಂದ ಮೋಡ ಕವಿದ ವಾತಾವರಣ ಇದ್ದರೂ ಗುಡುಗು ಸಿಡಿಲು ಮಳೆ ನಿರೀಕ್ಷಿಸದ ಜನರು ಒಮ್ಮೆಲೆ ಗಲಿಬಿಲಿಗೊಳಗಾದರು. ಗಂಗೊಳ್ಳಿ ಬೈಂದೂರು ಸಿದ್ಧಾಪುರ , ಹಾಲಾಡಿ , ತೆಕ್ಕಟ್ಟೆ , ಕೊಲ್ಲೂರು , ಕುಂದಾಪುರದಲ್ಲಿ ಗುಡುಗು ಸಹಿತ ಉತ್ತಮ ಮಳೆ ಆಯಿತು.

ಈ ವಾತಾವರಣ 21ರ ತನಕವೂ ಮುಂದುವರಿಯಲಿದ್ದು ಮೀನುಗಾರರು ಎಚ್ಚರ ವಹಿಸಬೇಕೆಂದು ಹಾಗೂ ಕರಾವಳಿ ಜನರು ಸುರಕ್ಷಿತ ಸ್ಥಳಗಳಿಗೆ ತೆರಳಬೇಕು ಎಂದು ತಿಳಿಸಲಾಗಿದೆ. ಕೇಂದ್ರ ಸರಕಾರದ ಹವಾಮಾನ ಇಲಾಖೆಯಿಂದ ಈ ಬಗ್ಗೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಮಾಹಿತಿ ನೀಡಲಾಗಿದ್ದು ಇನ್ನು ಎರಡು ದಿನ ಎಚ್ಚರ ವಹಿಸುವಂತೆ , ಅಗತ್ಯ ಕ್ರಮ ಕೈಗೊಳ್ಳುವಂತೆ ತಿಳಿಸಲಾಗಿದೆ.

## ರಜೆ ಬದಲಾವಣೆ– ಪರೀಕ್ಷೆಗಳಿಗೆ ತೊಂದರೆ

ರಾಜ್ಯ ಸರಕಾರ, ಉಡುಪಿ ಹಾಗೂ ದಕ್ಷಿಣ ಕನ್ನಡದಲ್ಲಿ ಸರಕಾರಿ ರಜೆಯನ್ನು 21ರ ಬದಲು 20ಕ್ಕೆ ಬದಲಾವಣೆ ಮಾಡಿರುವುದರಿಂದ ವಿಶ್ವವಿದ್ಯಾಲಯಗಳ ಪರೀಕ್ಷಾ ಚಟುವಟಿಕೆ ಮೇಲೆ ಪರಿಣಾಮ ಬೀರಿದ್ದು ವಿದ್ಯಾರ್ಥಿಗಳಿಗೆ ಬಹಳ ತೊಂದರೆ ಆದದ್ದಲ್ಲದೇ ಶಿಕ್ಷಣ ಸಂಸ್ಥೆಗಳ ಶೈಕ್ಷಣಿಕ ಚಟುವಟಿಕೆ ಮೇಲೂ ಪರಿಣಾಮ ಬೀರಿದೆ ಎಂದು ಹಲವು ಪ್ರಾಂಶುಪಾಲರು ಸಮಸ್ಯೆ ತೋಡಿಕೊಂಡಿದ್ದಾರೆ. ಪರೀಕ್ಷೆಗಳನ್ನು ಯಾವ ದಿನಾಂಕಕ್ಕೆ ಮುಂದೂಡಲಾಗಿದೆ ಎಂಬ ಮಾಹಿತಿಯೂ ಲಭ್ಯವಾಗಿಲ್ಲ ಎನ್ನಲಾಗಿದೆ.

## ಕುಂದಪ್ರಭ–ಕೋ.ಮ.ಕಾರಂತ ಪ್ರಶಸ್ತಿಗೆ ಆನಂದ ಸಿ. ಕುಂದರ್ ಆಯ್ಕೆ

ಕುಂದಾಪುರದ ಕುಂದಪ್ರಭ ಸಂಸ್ಥೆಯ ವತಿಯಿಂದ ಪ್ರತೀವರ್ಷ ಹಿರಿಯ ಪತ್ರಕರ್ತ , ವಾಗ್ಮಿ, ತರಬೇತುದಾರ ಕೋಣಿ ಮಹಾಬಲೇಶ್ವರ ಕಾರಂತರ ಹೆಸರಲ್ಲಿ ನೀಡಲಾಗುತ್ತಿರುವ ಕೋ.ಮ. ಕಾರಂತ ಪ್ರಶಸ್ತಿಯುನ್ನು ಈ ಬಾರಿ ಹಿರಿಯು ಮತ್ಸ್ಯೋದ್ಯಮಿ , ಸಾಮಾಜಿಕ ಧುರೀಣ , ಸಮಾಜ ಸೇವಕ , ದಾನಿ, ಆನಂದ ಸಿ. ಕುಂದರ್ ಅವರಿಗೆ ಪ್ರದಾನ ಮಾಡಲು ನಿರ್ಧರಿಸಲಾಗಿದೆ.

ಕುಂದಾಪುರದಲ್ಲಿ ದಿನಾಂಕ 15 ರಂದು ನಡೆದ ಸಭೆಯುಲ್ಲಿ ಹಿರಿಯು ಸಾಹಿತಿ ಕೋ.ಶಿವಾನಂದ ಕಾರಂತರು ಈ ಆಯ್ಕೆಯನ್ನು ಪ್ರಕಟಿಸಿದರು.

ಕಳೆದ 18 ವರ್ಷಗಳಿಂದ ಕೋ.ಮ.ಕಾರಂತ ಪ್ರಶಸ್ತಿಯನ್ನು ಸ್ವಾತಂತ್ರ್ಯ ಹೋರಾಟಗಾರರು , ವಿಜ್ಞಾನಿ , ಪ್ರಗತಿಪರ ಉದ್ಯಮಿಗಳು , ಸಾಹಿತಿಗಳು , ಇತಿಹಾಸಗಾರರು , ಸಂಶೋಧಕರು , ಚಲನಚಿತ್ರ ಕಲಾವಿದರು ಮುಂತಾದ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರಿಗೆ ನೀಡಲಾಗಿದೆ.



ಶ್ರೀಯುತ ಆನಂದ ಸಿ ಕುಂದರ್ ಹಲವು ದಶಕಗಳಿಂದ ಪ್ರಗತಿಪರ ಮತ್ಸ್ಯೋದ್ಯಮಿಯಾಗಿ ಕರ್ನಾಟಕ ಕರಾವಳಿಯಲ್ಲಿ ಕೀರ್ತಿಗಳಿಸಿದ್ದಲ್ಲದೇ ಸಾಮಾಜಿಕ ಕ್ಷೇತ್ರದಲ್ಲಿ ಅಪೂರ್ವ ಸೇವೆಯನ್ನು ಸಲ್ಲಿಸುವ ಮೂಲಕ ಜನಮನ್ನಣೆಯನ್ನು ಪಡೆದಿದ್ದಾರೆ. ಧಾರ್ಮಿಕ , ಶೈಕ್ಷಣಿಕ , ಕ್ರೀಡೆ, ಸಾಹಿತ್ಯ , ಸೇವಾಕ್ಷೇತ್ರಗಳ ಅಭಿವೃದ್ಧಿಯಲ್ಲಿ ಇವರ ಕೊಡುಗೆ ವಿಶೇಷ. ಗೀತಾನಂದ ಫೌಂಡೇಶನ್ ಪ್ರವರ್ತಕರಾಗಿ ಹಲವಾರು ಸೇವಾಕಾರ್ಯಗಳಿಗೆ ಪ್ರೋತ್ಸಾಹಿಸುತ್ತಿದ್ದಾರೆ. ಶ್ರೀ ಅಮೃತೇಶ್ವರಿ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷರಾಗಿ ದೇವಾಲಯದ ಅಭಿವೃದ್ಧಿ , ನಿರ್ವಹಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ಡಾ.ಕೋಟ ಶಿವರಾಮಕಾರಂತ ಪ್ರತಿಷ್ಠಾನದ ಕಾರ್ಯಾಧ್ಯಕ್ಷರಾಗಿ ನೂರಾರು ಕಾರ್ಯಕ್ರಮಗಳನ್ನು ನಡೆಸುವಲ್ಲಿ ಮಾರ್ಗದರ್ಶಕರಾಗಿದ್ದಾರೆ.

ಆನಂದ್ ಸಿ. ಕುಂದರ್ ಅವರಿಗೆ ಕೋ.ಮ.ಕಾರಂತ ಪ್ರಶಸ್ತಿಯನ್ನು ಜನವರಿ 20 ರಂದು ಕುಂದಾಪುರದ ಸ.ಪ.ಪೂ.ಕಾಲೇಜಿನ ರೋಟರಿ ಲಕ್ಷ್ಮೀನರಸಿಂಹ ಕಲಾಮಂದಿರದಲ್ಲಿ ನೀಡಲಾಗುವುದು ಎಂದು ಕುಂದಪ್ರಭ ಸಂಸ್ಥೆಯ ಅಧ್ಯಕ್ಷ ಯು.ಎಸ್.ಶೆಣೈ ತಿಳಿಸಿದ್ದಾರೆ.



ಜೆ.ಸಿ.ಐ. ಭವನ , ಝೂನ್ಸಿ ರಾಣಿ ಲಕ್ಷ್ಮೀಬಾಯಿ ಮಾರ್ಗ, ಶಾಸ್ತ್ರಿ ಸರ್ಕಲ್ ಬಳಿ, ಕುಂದಾಪುರ

‘ದಿ ಬೈಕ್ ಫಾರ್ಮ್’ THE BIKE FARM

ct : +91 9141566689, 91 7760272161 Email : thebikefarm2014@gmail.com Web : www.thebikefarm.in